# ವಿನಿಯೋಜಕ ಜಾಗೃತಿ!



**ಎಕ್ಸ್‌ಚೇಂಜ್‌ನ ಟ್ರೇಡಿಂಗ್ ವ್ಯವಸ್ಥೆಯ ಹೊರಗಿದ್ದುಕೊಂಡು, ಸೆಕ್ಯೂರಿಟಿಗಳಲ್ಲಿ ಟ್ರೇಡಿಂಗ್ ನಡೆಸುವ ವ್ಯಕ್ತಿಯೊಂದಿಗೆ ನೀವು ವ್ಯವಹಾರ ನಡೆಸುತ್ತಿರುವಿರಾ ?**

ಮಾನ್ಯತೆ ಪಡೆದಿರುವ ಸ್ಟಾಕ್ ಎಕ್ಸ್‌ಚೇಂಜ್‌ಗಳ ಸುಸ್ಥಾಪಿತ ಟ್ರೇಡಿಂಗ್ ವ್ಯವಸ್ಥೆಯ ಹೊರಗಿದ್ದುಕೊಂಡು ಕೆಲವು ನೀತಿರಹಿತ ವ್ಯಕ್ತಿಗಳು ಶೇರು-ವ್ಯವಹಾರ ನಡೆಸುತ್ತಿರುವ ವರದಿ ಇದೆ. ಪ್ರಾಯಶಃ ಈ ವ್ಯಕ್ತಿಗಳು, ಎನ್‌ಎಸ್‌ಇಯಂತಹ ಪ್ರಮುಖ ಎಕ್ಸ್‌ಚೇಂಜ್‌ಗಳು ಆನ್-ಲೈನ್ ಮೂಲಕ ಬಿತ್ತರಿಸುವ ಶೇರುಬೆಲೆಗಳನ್ನು ಆಧಾರವಾಗಿಟ್ಟುಕೊಂಡು, ಅಂತಹ ವ್ಯವಹಾರಗಳ ಖಾತೆಗಳನ್ನು ಇಟ್ಟುಕೊಳ್ಳುತ್ತಾರೆ ಮತ್ತು ಅವರ ಸೆಟ್‌ಲ್‌ಮೆಂಟ್ ಕೂಡ ಅನಧಿಕೃತವಾಗಿರುತ್ತದೆ ಮತ್ತು ಹೆಚ್ಚಾಗಿ ನಗದು ರೂಪದಲ್ಲಿರುತ್ತದೆ. ಅವರು ಈ ಚಟುವಟಿಕೆಗಳನ್ನು ಅನಧಿಕೃತ ಕ್ಯಾರಿ ಫಾರ್‌ವರ್ಡ್ ಮೆಕ್ಯಾನಿಸಂ ಮೂಲಕವೂ ನಡೆಸುತ್ತಿರಬಹುದು.

ಎನ್‌ಎಸ್‌ಇಯ ಯಾವುದೇ ಟ್ರೇಡಿಂಗ್ ಮೆಂಬರ್ ಅಥವಾ ಅದರ ನೊಂದಾಯಿತ ಸಬ್-ಬ್ರೋಕರ್ ಇಂತಹ ಚಟುವಟಿಕೆಗಳನ್ನು ನಡೆಸಿದಲ್ಲಿ, ಅದು ಎನ್‌ಎಸ್‌ಇಯ ನಿಯಮಗಳು, ಉಪನಿಬಂಧನೆಗಳು ಹಾಗೂ ನಿಬಂಧನೆಗಳಿಗೆ ವಿರುದ್ಧವಾಗಿರುವುದು. ಈ ಬಗ್ಗೆ ಎನ್‌ಎಸ್‌ಇಯು ಶಿಸ್ತುಕ್ರಮ ಕೈಗೊಳ್ಳುವುದು.



**ಕಾನೂನುಬಾಹಿರ ಟ್ರೇಡಿಂಗ್‌ನಿಂದ ನೀವು ನಿಮ್ಮನ್ನು ಏಕೆ ರಕ್ಷಿಸಿಕೊಳ್ಳಬೇಕು?**

ವಿನಿಯೋಜಕರು ಮಾರುಕಟ್ಟೆಯಲ್ಲಿ ವಿನಿಯೋಜನೆಗಾಗಿ ಅನುಸರಿಸುವ ಮೆಕ್ಯಾನಿಸಂ ಬಗ್ಗೆ ನಮಗೆ ಕಾಳಜಿ ಇದೆ. ಎಕ್ಸ್‌ಚೇಂಜ್ ಟ್ರೇಡಿಂಗ್ ಮೆಕ್ಯಾನಿಸಂನ ಹೊರತಾಗಿ ಬೇರೆ ಯಾವುದೇ ಟ್ರೇಡಿಂಗ್ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ವಿನಿಯೋಜಕರು ಯಾವುದೇ ವಿವಾದಕ್ಕೆ ಸಂಬಂಧಪಟ್ಟ ವಿವಾದ ಬಗೆಹರಿಸುವಿಕೆ ಹಾಗೂ ಆರ್ಬಿಟ್ರೇಶನ್ ಸೌಲಭ್ಯಕ್ಕೆ ಅರ್ಹರಲ್ಲ, ಹಾಗೂ, ಎನ್‌ಎಸ್‌ಇಯ ವಿನಿಯೋಜಕ ಸಂರಕ್ಷಣ ನಿಧಿಯ ಸೌಲಭ್ಯವನ್ನೂ ಪಡೆಯುವದಿಲ್ಲ.

## ಸಮರ್ಪಕ ರೀತಿಯಲ್ಲಿ ಮತ್ತು ಸುರಕ್ಷಿತವಾಗಿ ವಿನಿಯೋಜಿಸಿರಿ; ಸಂಬಂಧಿತ ಮಾಹಿತಿಯನ್ನು ತಿಳಿದುಕೊಂಡಿರಿ



- ಕೇವಲ ಸೆಬಿ (SEBI) ನೋಂದಾಯಿತ ಬ್ರೋಕರರ ಮೂಲಕ ಅಥವಾ ಅವರ ನೋಂದಾಯಿತ ಸಬ್-ಬ್ರೋಕರರ ಮೂಲಕವೇ ಸೆಕ್ಯೂರಿಟಿಗಳ ಖರೀದಿ-ಮಾರಾಟ ನಡೆಸಿರಿ. ಅವರು ಟ್ರೇಡಿಂಗ್ ಸೌಲಭ್ಯ ಒದಗಿಸುವ ಪ್ರತೀ ಸ್ಥಳದಲ್ಲೂ ಸೆಬಿ ನೋಂದಾವಣೆ ಪ್ರಮಾಣಪತ್ರವನ್ನು ಪ್ರದರ್ಶಿಸುವುದು ಕಡ್ಡಾಯವಾಗಿದೆ.
- ನಿಮ್ಮ ಬ್ರೋಕರರೊಂದಿಗೆ ಮೆಂಬರ್ ಕಾನ್‌ಸ್ಟಿಟ್ಯೂಎಂಟ್ ಒಪ್ಪಂದ ಮಾಡಿಕೊಂಡು ನಿಮ್ಮ ದಾಖಲೆಗಾಗಿ ಅದರ ಒಂದು ಪ್ರತಿಯನ್ನು ಪಡೆದುಕೊಳ್ಳಿ.
- ನೀವು ವ್ಯವಹಾರ ನಡೆಸಿದ 24 ಗಂಟೆಯೊಳಗೆ, ನಿಮ್ಮ ಬ್ರೋಕರು ನಿಮಗೆ ಸಹಿಯುಕ್ತ ಕಾಂಟ್ರಾಕ್ಟ್ ನೋಟ್ ನೀಡುತ್ತಾರೆಂಬುದನ್ನು ಖಾತ್ರಿಪಡಿಸಿಕೊಳ್ಳಿ. ನೀವು ಎನ್‌ಎಸ್‌ಇಯಲ್ಲಿನ ವ್ಯವಹಾರದ ಸತ್ಯತೆಯ ಬಗ್ಗೆ ಎನ್‌ಎಸ್‌ಇ ವೆಬ್‌ಸೈಟಿನ, ವ್ಯವಹಾರ ಪರೀಕ್ಷೆ ಸೌಲಭ್ಯವಾದ www.nseindia.com/content/equities/eq_trdverify.htm ನಲ್ಲಿ ಕೂಡ ತಾಳೆ ನೋಡಬಹುದಾಗಿದೆ. ವ್ಯವಹಾರ ನಡೆದ ನಂತರ 5 ಕಾರ್ಯ-ದಿನಗಳವರೆಗೆ ಈ ಮಾಹಿತಿ ಲಭ್ಯವಿರುವುದು.



- ಆಯಾ ಸೆಟ್‌ಲ್‌ಮೆಂಟ್‌ಗೆ ಸಂಬಂಧಪಟ್ಟ ಎನ್‌ಎಸ್‌ಇ ನಿಗದಿತ, ಪಾವತಿ ದಿನಾಂಕದ, ಮುಂದಿನ ಕಾರ್ಯದಿನದೊಳಗೆ ನಿಮ್ಮ ಹಣ / ಶೇರುಗಳು ನಿಮಗೆ ದೊರೆಯುತ್ತವೆಂದು ಖಾತ್ರಿಪಡಿಸಿಕೊಳ್ಳಿ.
- ನಿಮ್ಮ ಸೆಬಿ ನೋಂದಾಯಿತ ಬ್ರೋಕರ್‌ಗೆ/ಬ್ರೋಕರ್‌ರಿಂದ ಮಾತ್ರವೇ ನಿಮ್ಮ ಶೇರುಗಳನ್ನು ನೀಡಿರಿ/ಪಡೆಯಿರಿ.
- ಮಾರ್ಜಿನ್ಸ್ ಮತ್ತು ಸೆಟ್‌ಲ್‌ಮೆಂಟ್ ಬಾಧ್ಯತೆಗಳಿಗೆ ಸಂಬಂಧಪಟ್ಟ ಎಲ್ಲ ಹಣಪಾವತಿ / ಹಣ ಸ್ವೀಕೃತಿಗಳನ್ನು ನಿಮ್ಮ ಸೆಬಿ ನೋಂದಾಯಿತ ಬ್ರೋಕರ್ ಜೊತೆ ಅಕೌಂಟ್ ಪೇಯಿ ಚೆಕ್ / ಡಿಮಾಂಡ್ ಡ್ರಾಫ್ಟ್ ಮೂಲಕವೇ ನಡೆಸಿರಿ.

ಈ ಮಾರ್ಗದರ್ಶಕ ಸೂತ್ರಗಳು ನಿಮ್ಮ ಪ್ರಯೋಜನಕ್ಕಾಗಿ ಇವೆ. ಇವುಗಳನ್ನು ಅನುಸರಿಸಿರಿ.


**ನ್ಯಾಶನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್**

''ಎಕ್ಸ್‌ಚೇಂಜ್ ಪ್ಲಾಝಾ'', ಬಾಂದ್ರಾ-ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ), ಮುಂಬಯಿ 400051.

ಫೋನ್: 022-26598100-8114. ಫ್ಯಾಕ್ಸ್: 022-26598120. ಇ-ಮೈಲ್: cc_nse@nse.co.in

ದಯವಿಟ್ಟು ನಮ್ಮ ವೆಬ್‌ಸೈಟ್ ಸಂದರ್ಶಿಸಿ: www.nseindia.com ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಕಟಿಸಿದವರು-ಎನ್‌ಎಸ್‌ಇ.



A B and U - ia